ಶ್ರೀ ಯು. ಎಂ. ಮಾದಪ್ಪ.—ಈಗ ಎಷ್ಟು ಮೈಲಿಗಳ ರಸ್ತೆ ರಿಪೇರಿಯಾಗಿದೆ ?

*ಶ್ರೀ ಟಿ. ಚನ್ನಯ್ಯ.—5 ಮೈಲುಗಳು.

ಶ್ರೀ ಯು. ಎಂ. ಮಾದಪ್ಪ.—ಈ ರಸ್ತೆ ಜಿಲ್ಲಾ ಬೋರ್ಡಿಗೆ ಸೇರಿ ಎಷ್ಟು ದಿವಸಗಳಾಯಿತು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಈ ರಸ್ತೆಯ ಅನ್ಯಯಲ್ ರಿಪೇರಿ ಬಗ್ಗೆ ಅವರು ಒಂದು ವರ್ಷಮಾತ್ರ ಮೊಬಲಗನ್ನು ಕೊಟ್ಟಿದ್ದಾರೆ ಅಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅದನ್ನು ಪರಿಶೀಲನೆ ಮಾಡಿ ನುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಹೀಗೆ ಸರಿಯಾಗಿ ಹಣ ಸರಬರಾಯಿ ಆಗದೆ ಹೋದ್ದರಿಂದ ಈ ರಸ್ತೆ ವಾಹನಗಳ ಸಂಚಾರಣಿಗೆ ಸರಿಯಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ನಮಗೆ ಜಿಲ್ಲಾಧಿಕಾರಿಗಳು ಮಾಡಿರತಕ್ಕ ವರದಿಯಿಂದ ಆ ರಸ್ತೆ ವಾಹನ ಸೌಕರ್ಯಕ್ಕೆ ಅನುಕೂಲವಾಗಿರುತ್ತೆಂದು ತಿಳಿದು ಬಂದಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆ ಚೆನ್ನಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮತ್ತೊಂದು ಸಲ ಪರಿಶೀಲನೆ ಮಾಡಿ ನೋಡುತ್ತೀರಾ ?

*ಶ್ರೀ ಟಿ. ಚನ್ನಯ್ಯ.—ಆಗಲಿ.

ಶ್ರೀ ಬಿ. ರಾಚಯ್ಯ.—ಆದರೆ ಈಗಲೂ ಸಹ ಅಲ್ಲಿ ಕೇವಲ ಒಂದು ಕಾಲುದಾರಿ ಮಾತ್ರ ಇರುತ್ತದೆಯೇ ಹೊರತು ಗಾಡಿ ತಿರುಗಾಡುವುದಕ್ಕಾಗುವುದಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈ ವರ್ಷದಲ್ಲಿ 1,000 ರೂಪಾಯಿಗಳನ್ನು ಖರ್ಚುಮಾಡಿ ರಸ್ತೆ ರಿಪೇರಿಮಾಡಲಾಗಿದೆಯೆಂದು ನಮಗೆ ವರದಿ ಬಂದಿದೆ.

ಶ್ರೀ ಬಿ. ರಾಚಯ್ಯ.—ಈ ರಸ್ತೆಗೆ ಸ್ಪೆಷಲ್ ಗ್ರಾಂಟನ್ನಾದರೂ ಕೊಟ್ಟು ಎತ್ತಿನ ಗಾಡಿಗಳು ತಿರುಗಾಡುವಷ್ಟರಮಟ್ಟಿಗಾದರೂ ಈ ರಸ್ತೆಯನ್ನು ಅನುಕೂಲಪಡಿಸಿ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈ ವಿಚಾರವಾಗಿ ಜಿಲ್ಲಾಧಿಕಾರಿಗಳೊಡನೆ ಸಮಾಲೋಚನೆ ಮಾಡಿ ಆ ಕೆಲಸವನ್ನು ಕೈಗೊಳ್ಳಲು ಆಲೋಚನೆ ಮಾಡಲಾಗುತ್ತದೆ.

Mr. SPEAKER.—Questions Nos. 481 and 589 may be taken up together.

Mysore Ayurvedic and Unani College (expansion and location).

Q.—481. Sri V. R. NAIDU (Malleswaram).—

Will the Government be pleased to state :—

(*a*) whether it has come to their notice that the expansion of the Mysore Ayurvedic and Unani College is very necessary ;

(*b*) whether they have noticed the list of grievances of the students thereof ;

(*c*) whether they had given any assurance when the students of that College had last launched Satyagraha ;

(*d*) whether it has come to their notice that a good accommodation has been given to the contractor there, which practice is not found in any other hospital ;

(*e*) if so, why this practice should not be abolished and the accommodation used for the College classes ;

(*f*) whether it is under their contemplation to transfer the Ayurvedic College to Bangalore or whether they would expand the College there and provide a hostel for the convenience of the boy and girl students ?

A.—Sri T. CHANNIAH (Minister for Public Health and Local Self-Government).—

(*a*) Yes.
(*b*) Yes.
(*c*) Yes.
(*d*) No.
(*e*) Does not arise in view of reply to clause (*d*) above.
(*f*) No.

Q.—589. Sri SHIVANANJE GOWDA (Mysore Taluk).—

Will the Government be pleased to state :—

(*a*) whether it has come to their notice that the students of the Mysore Ayurvedic College had been on strike ;

(*b*) the reason for the strike ;

(*c*) whether they consider the demands of the students were reasonable ; if so, the action taken to meet their demands ?

A.—Sri T. CHANNIAH (Minister for Public Health and Local Self-Government).—

(*a*) Yes.
(*b*) They have asked for increased facilities.
(*c*) The matter is under examination.

ಶ್ರೀ ವಿ. ಆರ್. ನಾಯ್ಡು.—ನನ್ನ ಪ್ರಶ್ನೆಗಳಿಗೆ ಉತ್ತರವಾಗಿ, ಹೌದು, ಹೌದು, ಹೌದು, ಇಲ್ಲ, ಮೇಲಿನ (ಡಿ) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಈ ಪ್ರಶ್ನೆಗೆ ಅವಕಾಶವಿಲ್ಲ, ಇಲ್ಲ, ಎಂದು ಹೇಳಿದೆ. ಇದರಿಂದೇನೂ ಗೊತ್ತಾಗುವುದಿಲ್ಲ.

(ಶ್ರೀ ವಿ. ಆರ್ ನಾಯ್ಡು.)

ಮೈಸೂರು ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಬಡಾವಣೆಯು ಅತ್ಯವಶ್ಯಕವೆಂಬುದು ಸರ್ಕಾರದ ಪರ ಗಮನಕ್ಕೆ ಬಂದಿದೆಯೆ ಎಂದು ಕೇಳಿರುವುದಕ್ಕೆ ಹೌದು ಎಂದು ಮಾತ್ರ ಹೇಳಿದ್ದಾರೆ; ವಿವರಗಳನ್ನು ಕೊಡಬೇಡವೆ?

—ಅಧ್ಯಕ್ಷರು:—ಗಮನಕ್ಕೆ ಬಂದಿದೆಯೆ -ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ, ಇದೇ ಉತ್ತರ.

ಶ್ರೀ ವಿ. ಆರ್. ನಾಯ್ಡು.—ಅಲ್ಲಿ ಕಂಟ್ರಾಕ್ಟರಿಗೆ ಮನೆಯನ್ನು ಕೊಟ್ಟಿರುವುದು ನಿಜವಲ್ಲವೆ?

Mr. SPEAKER.—I cannot allow further questions on that. They have given an answer; you can take it for what it is worth.

ಶ್ರೀ ವಿ. ಆರ್. ನಾಯ್ಡು.—ಕೊಟ್ಟಿರುವುದು ನಿಜ, ಮಂತ್ರಿಗಳು ಬಂದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಅಧ್ಯಕ್ಷರು.—ಅದನ್ನು ಬೇರೆ ಸಮಯದಲ್ಲಿ ಉಪಯೋಗಿಸಿಕೊಳ್ಳಬಹುದು.

ಶ್ರೀ ವಿ. ಆರ್. ನಾಯ್ಡು.—ಆ ಕಾಲೇಜನ್ನು ಬೆಂಗಳೂರಿಗೆ ವರ್ಗಾವಣೆ ಮಾಡುತ್ತೇವೆಂದು ಹೇಳಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ವಿ. ಆರ್. ನಾಯ್ಡು.—ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡಿದ್ದುದೇಕೆಂಬುದನ್ನು ಸಭೆಗೆ ಹೇಳುತ್ತೀರಾ?

ಶ್ರೀ ಟಿ. ಚನ್ನಯ್ಯ.—ಅವರು ಈಗಿರತಕ್ಕ ಆಸ್ಪತ್ರೆಯಲ್ಲಿ ಮತ್ತು ಕಾಲೇಜಿನಲ್ಲಿ ಕೆಲವು ಅನುಕೂಲತೆಗಳನ್ನು ಕಲ್ಪಿಸಿ ಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಂಡಿದ್ದರು. ಈ ಬಗ್ಗೆ ಅನೇಕಸಾರಿ ಒತ್ತಾಯ ಮಾಡಿದ್ದರು. ಅಲ್ಲದೆ ಆ ಕಾಲೇಜನ್ನು ಅಪ್‌ಗ್ರೇಡ್ ಮಾಡಬೇಕೆಂದು ಕೇಳಿದ್ದರು. ಇದೆಲ್ಲವನ್ನು ಪರಿಶೀಲಿಸಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಚನೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಈ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡುತ್ತೇವೆಂದು ಹೇಳಿದುದು ಗಮನಕ್ಕೆ ಬಂದಿದೆಯೆ?

ಅಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಟಿ. ಚನ್ನಯ್ಯ.—ಮಾಡಿದ್ದರು, ಅಮೇಲೆ ನಿಲ್ಲಿಸಿದರು.

ಶ್ರೀ ವಿ. ಆರ್. ನಾಯ್ಡು.—ವಿದ್ಯಾರ್ಥಿಗಳ ಕುಂದುಕೊರತೆಗಳೇನೆಂಬುದನ್ನು ಹೇಳಿಕೊಂಡಿದ್ದಾರೆ. ಅವುಗಳನ್ನು ಆದಷ್ಟು ಜಾಗ್ರತೆ, ಎಂದರೆ, ಇನ್ನು ಹದಿನೈದು ದಿವಸಗಳೊಳಗೆ ನಿವಾರಣೆಮಾಡಿ ಸರಿಯಾದ ಏರ್ಪಾಡು ಮಾಡಿಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ನಿರ್ದಿಷ್ಟವಾಗಿ ಇಷ್ಟು ದಿವಸಗಳೊಳಗೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಿ. ಆರ್. ನಾಯ್ಡು.—ಆದಷ್ಟು ಜಾಗ್ರತೆ ತಕ್ಕ ಏರ್ಪಾಡು ಮಾಡಲು ಪ್ರಯತ್ನಮಾಡುತ್ತಿರಾ?

—ಅಧ್ಯಕ್ಷರು.—ಈ ಸಂದರ್ಭದಲ್ಲಿ ಸ್ವಲ್ಪ ಭರವಸೆ ಕೊಡಬೇಕು; ನಮ್ಮನೆ ಮಂತ್ರಿಗಳು ಹೀಗೆಯೇ ಹೇಳುತ್ತಾ ಹೋಗುತ್ತಾರೆ. (ನಗು!)

ಶ್ರೀ ಶಿವನಂಜೇಗೌಡ.—ಹೆಚ್ಚು ಅನುಕೂಲಗಳು ಬೇಕೆಂದು ಕೇಳಿ ವಿದ್ಯಾರ್ಥಿಗಳು ಸತ್ಯಾಗ್ರಹ ಹೂಡಿದ್ದರೆಂದು ಹೇಳಿದಿರಿ, ಅದರ ಮೇಲೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ಈಗಿರತಕ್ಕ ಕಟ್ಟಡವನ್ನು ಬಡಾವಣೆ ಮಾಡಬೇಕು, ಆಸ್ಪತ್ರೆಯಲ್ಲಿ bed strength ಹೆಚ್ಚುಮಾಡಬೇಕು, ಆ ಕಾಲೇಜಿನಲ್ಲಿ ಪ್ರೊಫೆಸರುಗಳನ್ನೂ ಅಸಿಸ್ಟೆಂಟ್ ಪ್ರೊಫೆಸರುಗಳನ್ನೂ ಹೆಚ್ಚಾಗಿ ನೇಮಿಸಬೇಕು, ಪ್ರಾಸ್‌ಪೆಕ್ಟಸ್ ಬೇರೆರೀತಿ ಮಾಡಬೇಕು, standard of teaching ಬದಲಾವಣೆ ಮಾಡಬೇಕು, ಇತ್ಯಾದಿ ನಾನಾ ಅನುಕೂಲಗಳನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ಕೇಳಿದ್ದಾರೆ. ಸರ್ಕಾರದವರು ಒಂದು ತಜ್ಞರ ಸಮಿತಿಯನ್ನು ನೇಮಕಮಾಡಿ, ಆ ಸಮಿತಿಯ ವರದಿಯನ್ನು ಡೈರೆಕ್ಟರವರು ಕಳುಹಿಸಿದನಂತರ ಸರ್ಕಾರದವರು ಅದನ್ನು ಪರಿಶೀಲನೆಮಾಡಿ, ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಶಿವನಂಜೇಗೌಡ.—ಅದಕ್ಕೆಲ್ಲಾ ಎಷ್ಟು ಹಣ ಖರ್ಚಾಗುತ್ತದೆ?

ಶ್ರೀ ಟಿ. ಚನ್ನಯ್ಯ.—ಸುಮಾರು ಎಂಟು ಲಕ್ಷ ರೂಪಾಯಿ ಆಗಬಹುದೆಂದು ಅಂದಾಜಾಗಿದೆ

ಶ್ರೀ ಶಿವನಂಜೇಗೌಡ.—ಎಷ್ಟು ದಿವಸದಲ್ಲಿ ಪೂರು ಮಾಡುತ್ತೀರಿ?

ಶ್ರೀ ಟಿ. ಚನ್ನಯ್ಯ.—ಬೋರ್ಡಿನ ಸೆಕ್ರೆಟರಿಗಳಿಂದ ವರದಿ ಬಂದಿಲ್ಲ, ಬಂದನಂತರ ಅದನ್ನು ಪರಿಶೀಲನೆ ಮಾಡಿ ಸೂಕ್ತಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri U. M. MADAPPA.—Is there a Central Board of Indian Medicine in Mysore State?

Sri T. CHANNIAH.—Yes.

Sri U. M. MADAPPA.—When was it established?

Mr. SPEAKER.—It does not arise out of this question.

Sri U. M. MADAPPA.—Is it not a fact that it is managed . . . .

Mr. SPEAKER.—The question of management does not arise in this question.

Sri U. M. MADAPPA.—Is it not managed by the Board of Directors?

Sri T. CHANNIAH.—Yes.

Sri U. M. MADAPPA.—Who are the members of this Board of Indian Medicine?

Sri T. CHANNIAH.—I do not remember the names of all the members. But I can give you the names of the official members. . . .

Mr. SPEAKER.—In a question concerning the upgrading of the Ayurvedic College, you cannot ask all questions concerning the College. You can put questions only with regard to the upgrading of that college.

Sri U. M. MADAPPA.—That is what I am doing, Sir. My question concerns with that only. Later on, from the

subject matter, you will know that it pertains to that subject matter only.

Who is the Chairman of this Board?

Sri T. CHANNIAH.—The Minister for Public Health.

Sri U. M. MADAPPA.—Is it not a fact that the Chairman cannot devote enough attention to the activities of this Board due to various other pre-occupations?

Sri T. CHANNIAH.—There is the Secretary and the Principal of the College. They have enough time. I have also sufficient time to attend to the welfare activities of the College.

Sri U. M. MADAPPA.—Is there any whole-time officer who is in charge of the Board?

Sri T. CHANNIAH.—The Secretary to Government, Medical and Public Health Departments is the Secretary of the Board.

Sri U. M. MADAPPA.—Is he a whole-time officer attending to this work?

Sri T. CHANNIAH.—Not whole-time. But in addition to his other duties, he does this work.

Sri S. SRINIVASA IYENGAR.—Will the Government be pleased to state whether it is not a fact that a Bill had been drafted in the year 1949 to up-grade this institution?

Sri T. CHANNIAH.—Yes.

Sri S. SRINIVASA IYENGAR.—May I know why the Government did not introduce that Bill till today?

Sri T. CHANNIAH.—The Bill did not aim at upgrading the institution. The Bill provided for recognition of the Diploma course and allied matters.

Sri S. SRINIVASA IYENGAR.—I want to know why that Bill has not been introduced in the Legislature.

Sri T. CHANNIAH.—It does not arise out of this question.

Mr. SPEAKER.—Yes.

ಶ್ರೀ ಜಿ. ದುಗ್ಗಪ್ಪ.—ಇದನ್ನು ಅಪ್‌ಗ್ರೇಡ್ ಮಾಡುವ ವಿಷಯವನ್ನು ಪರಿಶೀಲನೆಯಲು ತಜ್ಞರ ಸಮಿತಿಯನ್ನು ನೇಮಕ ಮಾಡಲಾಗಿದೆಯೆಂದು ಹೇಳಿದಿರಿ, ಅದು ಯಾವಾಗ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಜಿ. ದುಗ್ಗಪ್ಪ.—ಆ ಸಮಿತಿಯಿಂದ ಏನಾದರೂ ವರದಿ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಇನ್ನೂ ಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಮೈಸೂರಿನಲ್ಲೇ ಉಳಿಸಬೇಕೆಂದು ಹೇಳಲು ಪ್ರಬಲವಾದ ಕಾರಣ ವೇನು?

ಶ್ರೀ ಟಿ. ಚನ್ನಯ್ಯ.—ಈಗ ಅಲ್ಲಿರತಕ್ಕ ಕಾಲೇಜು ಕಟ್ಟಡವನ್ನು ಒಬ್ಬರು ದಾನಿಗಳು ಕಟ್ಟಿಸಿದ್ದು, ಆದುದರಿಂದ ಅಲ್ಲೇ ಇರಿಸಬೇಕೆಂಬ ಅಭಿಪ್ರಾಯ ಬಂತು. ಅಲ್ಲದೆ ಮೈಸೂರು ನಗರಕ್ಕೆ ಈ ಅನುಕೂಲಬೇಕೆಂದೂ, ಅಲ್ಲೇ ಕಾಲೇಜಿರಬೇಕೆಂದೂ ಅಲ್ಲಿನ ಜನ ಒತ್ತಾಯಮಾಡಿದುದು ಮತ್ತೊಂದು ಕಾರಣ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನಲ್ಲಿ ದೊಡ್ಡ ಆಯುರ್ವೇದಿಕ್ ಆಸ್ಪತ್ರೆಇದೆಯಲ್ಲವೆ?

ಶ್ರೀ ಟಿ. ಚನ್ನಯ್ಯ.—ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಲ್ಲದೆ ಬೇರೆ ಹೆಚ್ಚು ಆಸ್ಪತ್ರೆಗಳಿದ್ದು, ಬೆಡ್ ಸ್ಪೇಸಿಂಗ್ ಕೂಡ ಹೆಚ್ಚಾಗಿದ್ದು ಇಲ್ಲಿಗೆ ಕಾಲೇಜನ್ನು ವರ್ಗಮಾಡುವುದಾದರೆ ಹೆಚ್ಚಿನ ಖರ್ಚಿಲ್ಲದೆ ಉತ್ತಮಪಡಿಸಲವಕಾಶವಾಗುತ್ತದಲ್ಲವೆ?

ಶ್ರೀ ಟಿ. ಚನ್ನಯ್ಯ.—ಆಗುತ್ತದೆ. ಆದರೂ ಅಲ್ಲಿ ಈಗಿರತಕ್ಕ ಆಸ್ಪತ್ರೆಯ ಬೆಡ್‌ಸ್ಪೇಸಿಂಗ್ ಹೆಚ್ಚುಮಾಡಿ, ಕಟ್ಟಡವನ್ನು ದೊಡ್ಡದಾಗಿ ಕಟ್ಟಿಸಿ, ಅದನ್ನು ಅದೇ ಸ್ಥಳದಲ್ಲಡಬೇಕೆಂದು ಅನೇಕ ಜನರು ಸರ್ಕಾರದಲ್ಲಿ ಹೇಳಿದುದು ಮತ್ತು ಇನ್ನೂ ಕೆಲವು ಕಾರಣಗಳಿಂದ ಅಲ್ಲೇ ಇರಬೇಕೆಂದು ಸರ್ಕಾರ ತೀರ್ಮಾನಕ್ಕೆ ಬಂದಿದ್ದಾರೆ.

General Hospital at Tumkur (visit of E.N.T. and Eye specialists.)

Q.—511. Sri T. N. MUDALAGIRI GOWDA (Kunigal).—

Will the Government be pleased to state:—

(*a*) since when arrangements were made for the visit of E.N.T. and Eye Specialists once a month to the General Hospital, Tumkur;

(*b*) the days fixed in a month for the visit of these Specialists;

(*c*) whether it is not a fact that there was an E.N.T. Specialist and an Eye Specialist from the beginning in the General Hospital, Tumkur;

(*d*) the reasons for discontinuing them now;

(*e*) whether arrangements will be made to keep an E.N.T. Specialist and an Eye Specialist permanently at the General Hospital?

A.—Sri T. CHANNIAH (Minister for Public Health and Local Self-Government).—

(*a*) The arrangements were made as per Government Orders Nos. M.